# ಅಗಾಸ್ಸಿಯ ಶಿಕ್ಷಣ ಸೇವೆ

ಆ್ಯಂಡ್ರಿ ಅಗಾಸ್ಸಿ ಕಳೆದ ವಾರ ಮುಂಬೈಗೆ ಬಂದಿದ್ದು ದೊಡ್ಡ ಸುದ್ದಿಯಾಗಲೇ ಇಲ್ಲ. ಆತ ಟೆನಿಸ್ ಆಡಲು ಬಂದಿರಲಿಲ್ಲ. ಎಂಟು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳನ್ನು ಗೆದ್ದ, ಒಂದು ಕಾಲದ ವಿಶ್ವದ 'ನಂಬರ್ ಒನ್', 48ರ ಹರೆಯದ ಈ ಟೆನಿಸಿಗ, ವೃತ್ತಿಪರ ಟೆನಿಸ್‌ನಿಂದ ನಿವೃತ್ತಿಯಾಗಿ 12 ವರ್ಷಗಳೇ ಉರುಳಿರುವುದರಿಂದ ಈಗ ಆತನ ಆಟ ನೋಡಲು ಪ್ರೇಕ್ಷಕರು ಕಿಕ್ಕಿರಿದು ನೆರೆಯುವುದೂ ಇಲ್ಲ. ಆತ ಬಂದದ್ದು ಭಾರತದಲ್ಲಿ 'ಸ್ಟೈರ್ ಪಂಡಾ' ಎನ್ನುವ ತನ್ನ ಕ್ರೀಡಾ ಸ್ಟಾರ್ಟಪ್ ಹೂಡಿಕೆಯ ಕಂಪನಿ ಕಚೇರಿ ತೆರೆಯಲು. ಈ ಕಂಪನಿಯು ಕೃತಕ ಬುದ್ಧಿಮತ್ತೆಯ ಶೈಕ್ಷಣಿಕ ಉತ್ಪನ್ನಗಳನ್ನು ತಯಾರಿಸುತ್ತಿದೆ. ಈ ಉತ್ಪನ್ನಗಳು ಬಳಕೆಯಾಗುವುದು ಕಲಿಕೆಯಲ್ಲಿ ತೊಂದರೆ ಇರುವ ಮಕ್ಕಳಿಗೆ. ಇದಕ್ಕೂ ಮುನ್ನ ಅಗಾಸ್ಸಿ ಸ್ಥಾಪಿಸಿದ್ದು 'ಟರ್ನರ್– ಅಗಾಸ್ಸಿ ಚಾರ್ಟರ್ ಸ್ಕೂಲ್ ಫೆಸಿಲಿಟೀಸ್ ಫಂಡ್.' 2013ರಲ್ಲಿ ಗೆಳೆಯರ ಜೊತೆ ಸೇರಿ ಆತ ಸ್ಥಾಪಿಸಿದ 100 ಕೋಟಿ ಡಾಲರ್‌ನ ಈ ನಿಧಿ ಜಗತ್ತಿನ ಹಲವು ದೇಶಗಳಲ್ಲಿ ಶಾಲೆಗಳನ್ನು ನಡೆಸುತ್ತಿದೆ. ಅಮೆರಿಕವೊಂದರಲ್ಲೇ 90ಕ್ಕೂ ಹೆಚ್ಚು ಶಾಲೆಗಳಿವೆ. ಸಾರ್ವಜನಿಕ ನಿಧಿಯಿಂದ ಖಾಸಗಿ ಶಾಲೆಗಳನ್ನು ನಡೆಸುವುದು ಈ ಯೋಜನೆ. ಡಿಸ್‌ಲೆಕ್ಸಿಯ (ಓದುವುದು ಮತ್ತು ಬರೆಯುವುದರಲ್ಲಿ ತೊಂದರೆ ಹೊಂದಿರುವ) ಪೀಡಿತ ಮಕ್ಕಳಿಗಾಗಿ ತೆರೆದಿರುವ ವಿಶೇಷ ಶಾಲೆಯಿದು. ಬಹುತೇಕ ಚಾರ್ಟರ್ ಸ್ಕೂಲ್‌ಗಳಲ್ಲಿ ಟ್ಯೂಷನ್ ಫೀಸ್ ಇರುವುದಿಲ್ಲ. ತನ್ನ ದುಡಿಮೆಯ ಹಣವನ್ನು ಬಿಸಿನೆಸ್ ಮತ್ತು ಸಮಾಜ ಸೇವೆಗೆ ಬಳಸುವ ಈ ವಿಶಿಷ್ಟ ಯೋಜನೆ ಅಗಾಸ್ಸಿಗೆ ವಿಶ್ವದಾದ್ಯಂತ ಅಭಿಮಾನಿಗಳನ್ನು ಒದಗಿಸಿಕೊಟ್ಟಿದೆ. ಜೊತೆಗೆ ತನ್ನದೇ ಹೆಸರಿನ ಫೌಂಡೇಷನ್ ಸ್ಥಾಪಿಸಿರುವ ಅಗಾಸ್ಸಿ, ದಕ್ಷಿಣ ನೆವಾಡಾದಲ್ಲಿ ತೊಂದರೆಯಲ್ಲಿರುವ ಮಕ್ಕಳಿಗೆ ನೆರವಾಗಲು 6 ಕೋಟಿ ಡಾಲರ್ ಮೊತ್ತದ ನಿಧಿಯೊಂದನ್ನು ಸ್ಥಾಪಿಸಿದ್ದಾನೆ.

ಶಿಕ್ಷಣದಲ್ಲಿ ಹಿಂದುಳಿದ ಮಕ್ಕಳಿಗೆ ಅನುಕೂಲವಾಗುವಂತಹ ಈ ಬಿಸಿನೆಸ್ ಐಡಿಯಾ ಹೊಳೆಯಲು ಕಾರಣ ಅಗಾಸ್ಸಿಯ ಬಾಲ್ಯದ ಶಾಲಾ ಕಲಿಕೆ! ಆತ ಎಂಟನೇ ತರಗತಿಯ ಡ್ರಾಪೌಟ್! ಆತನಿಗೆ ಕಲಿಕೆಯ ತೊಂದರೆ ಇತ್ತು. ಕಲಿಕೆ ಕೈಹಿಡಿಯದ ಬಳಿಕ ಟೆನಿಸ್‌ನತ್ತ ಫೋಕಸ್ ಮಾಡಿದ. ಟೆನಿಸ್‌ನಲ್ಲಿ ಏರಿದ ಎತ್ತರ ಅಗಾಧವೇ. 1990ರಿಂದ 2000ದವರೆಗೆ ಟೆನಿಸ್ ಲೋಕದಲ್ಲಿ ಅಗಾಸ್ಸಿಯದ್ದೇ ಆಧಿಪತ್ಯ. ಎದುರಾಳಿಯ ಸರ್ವಿಸ್ ಮುರಿಯುವುದರಲ್ಲಿ ಮತ್ತು ಹಿಂತಿರುಗಿಸುವುದರಲ್ಲಿ ಅಗಾಸ್ಸಿಯ ವಿಶಿಷ್ಟ ಶೈಲಿ ಆ ಕಾಲದಲ್ಲಿ ಹೆಸರುವಾಸಿ. 1986ರಲ್ಲಿ ವೃತ್ತಿಪರ ಟೆನಿಸ್ ರಂಗ ಪ್ರವೇಶಿಸಿದ ಅಗಾಸ್ಸಿ, ಒಟ್ಟು 60 ಪ್ರತಿಷ್ಠಿತ ಟೆನಿಸ್ ಪ್ರಶಸ್ತಿಗಳನ್ನು ಗೆದ್ದುಕೊಂಡವನು. 1995ರಿಂದ 2003ರ ಅವಧಿಯಲ್ಲಿ ನಾಲ್ಕು ಬಾರಿ ಆಸ್ಟ್ರೇಲಿಯನ್ ಓಪನ್, 94 ಮತ್ತು 99ರಲ್ಲಿ ಅಮೆರಿಕ ಓಪನ್, 99ರಲ್ಲಿ ಫ್ರೆಂಚ್ ಮತ್ತು 92ರಲ್ಲಿ ವಿಂಬಲ್ಡನ್ ಪ್ರಶಸ್ತಿ ಗೆದ್ದು ಆ ಕಾಲದ ವಿಶ್ವದಾಖಲೆ ನಿರ್ಮಿಸಿದ. 1996ರ ಒಲಿಂಪಿಕ್ಸ್‌ನಲ್ಲೂ ಚಿನ್ನ ಗೆದ್ದದ್ದು ಈತನ ಹೆಗ್ಗಳಿಕೆ.



1995ರಲ್ಲಿ ವಿಶ್ವದ 'ನಂಬರ್ ಒನ್' ಟೆನಿಸಿಗನ ಸ್ಥಾನಕ್ಕೆ ಏರಿದ ಅಗಾಸ್ಸಿ, ವೈಯಕ್ತಿಕ ತೊಂದರೆಗಳಿಂದಾಗಿ ಕೆಲವೇ ಸಮಯದಲ್ಲಿ ಆ ಪಟ್ಟದಿಂದ ಕೆಳಗಿಳಿಯಬೇಕಾಯಿತು. ರ್‍ಯಾಂಕಿಂಗ್ ಎಷ್ಟು ಕೆಳಕ್ಕಿಳಿಯಿತೆಂದರೆ ಎರಡು ವರ್ಷಗಳಲ್ಲಿ ವಿಶ್ವ ರ್‍ಯಾಂಕಿಂಗ್‌ನಲ್ಲಿ 141ನೇ ಸ್ಥಾನಕ್ಕಿಳಿದಿದ್ದ. ಆದರೆ 1999ರಲ್ಲಿ ಮತ್ತೆ 'ನಂಬರ್ ಒನ್' ಆಗಿ ನಾಲ್ಕು ವರ್ಷಗಳ ಕಾಲ ತನ್ನ ಅತ್ಯುನ್ನತ ಫಾರ್ಮ್ ಉಳಿಸಿಕೊಂಡ. ಎದುರಾಳಿಗೆ ಆಟವಾಡಲು ಅವಕಾಶವನ್ನೇ ಕೊಡದೆ ಕ್ಷಿಪ್ರಗತಿಯಲ್ಲಿ ಸರ್ವ್ ಮುರಿಯುವುದು ಈತನ ಯಶಸ್ವಿ ತಂತ್ರ. ಗ್ರೌಂಡ್‌ಸ್ಟ್ರೋಕ್, ಎರಡೂ ಕೈಗಳ ಬ್ಯಾಕ್‌ಹ್ಯಾಂಡ್ ಆಟ ಮತ್ತು ಬೇಸ್‌ಲೈನ್ ಗೇಮ್‌ನಲ್ಲೂ ಹೆಸರುವಾಸಿ. ಗಟ್ಟಿ, ಆವೆಮಣ್ಣು ಮತ್ತು ಹುಲ್ಲುಹಾಸಿನ ಮೂರೂ ಅಂಕಣಗಳಲ್ಲಿ ಪಾರಮ್ಯ ಮೆರೆದದ್ದು ವಿಶೇಷ. ಬೆನ್ನುಹುರಿಯ, ಕಾಲಿನ ಹಿಂಭಾಗದ ಸ್ನಾಯುಸೆಳೆತ ಮತ್ತು ಹಿಮ್ಮಡಿ ನೋವಿನಿಂದ ಬಳಲಿದ ಬಳಿಕ 2006ರ ಕೊನೆಯಲ್ಲಿ ಅಗಾಸ್ಸಿ ವೃತ್ತಿಪರ ಟೆನಿಸ್‌ನಿಂದ ನಿವೃತ್ತಿ ಪಡೆದ. ನಿವೃತ್ತಿಯ ಬಳಿಕ ಕ್ರೀಡಾಕ್ಷೇತ್ರದಲ್ಲೇ ಬಿಸಿನೆಸ್ ದಾರಿಯನ್ನು ಕಂಡುಕೊಂಡಿರುವುದು ಕುತೂಹಲಕರ.

90ರ ದಶಕದ ಆರಂಭದಲ್ಲಿ ಅಗಾಸ್ಸಿ ತನಗಿಂತ 28 ವರ್ಷ ಹೆಚ್ಚು ವಯಸ್ಸಿನ ಅಮೆರಿಕನ್ ನೃತ್ಯಗಾತಿ ಬಾರ್ಬರಾ ಸ್ಟ್ರೈಸ್ಯಾಂಡ್ ಜೊತೆಗೆ ಡೇಟಿಂಗ್ ನಡೆಸಿದ್ದು ಸುದ್ದಿಯಾಗಿತ್ತು. 2001ರಲ್ಲಿ 'ಟೆನಿಸ್‌ಲೋಕದ ಸಾರ್ವಕಾಲಿಕ ಸುಂದರಿ' ಎಂದೇ ಖ್ಯಾತಿ ಹೊಂದಿದ ಸ್ಟೆಫಿ ಗ್ರಾಫ್‌ಳನ್ನು ಅಗಾಸ್ಸಿ ಮದುವೆಯಾದ. ಇಬ್ಬರು ಮಕ್ಕಳ ಈ ಸಂಸಾರ ಲಾಸ್‌ವೆಗಾಸ್‌ನಲ್ಲಿ ನೆಲೆಸಿದೆ. 'ಮಕ್ಕಳು ಟೆನಿಸ್ ಆಟಗಾರರೇ ಆಗಬೇಕೆಂದು ನಾವೆಂದೂ ಒತ್ತಡ ಹೇರಿಲ್ಲ' ಎನ್ನುವುದು ಈ ದಂಪತಿಯ ಹೇಳಿಕೆ. 'ಬಾಲ್ಯದಲ್ಲಿ ನನಗೆ ಸೂಕ್ತ ಶಿಕ್ಷಣ ಸಿಗದಿದ್ದುದೇ ನಾನೀಗ ಶಿಕ್ಷಣ ಕ್ಷೇತ್ರದಲ್ಲಿ ಹೂಡಿಕೆ ಮಾಡಲು ಮುಖ್ಯ ಕಾರಣ' ಎಂದಿದ್ದಾನೆ ಅಗಾಸ್ಸಿ. ಇನ್ನು ಮುಂದೆ ಈತನ ಕಂಪನಿಯ ಕ್ರೀಡಾ ಉಪಕರಣಗಳು ಭಾರತದ ಮಾರುಕಟ್ಟೆಯಲ್ಲಿ ಕಡಿಮೆ ಬೆಲೆಗೆ ಸಿಗಬಹುದು.

■ ಬಿಂದು

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65